ಇನ್‌ಫ್ಲುಯೆನ್ಸ್ ನಿಮಗೆ ತಿಳಿಯದಂತೆಯೇ ನಿಮ್ಮ ಮೇಲೆ ಆಗಿದೆಯೆನಿಸುತ್ತದೆ. ಅದೂ ಮಣಿಕರ್ಣಿಕ ಘಾಟನ್ನು ಈಗ ನೆನೆಯುವುದೇ ಬೇಡ, ಸದ್ಯ ನಾವೀಗ ಆಗಸದಲ್ಲಿ ಇದ್ದೇವೆ'

ಅವಳ ಮಾತುಗಳಿನ್ನೂ ಮುಗಿದಿರಲಿಲ್ಲ. ಅಷ್ಟರಲ್ಲಿ ಮುಂದಿನ ಐದಾರು ನಿಮಿಷಗಳಲ್ಲಿ ಟರ್ಬ್ಯುಲೆನ್ಸ್ ಎದುರಾಗಬಹುದೆಂದು, ಪ್ರಯಾಣಿಕರು ಫ್ಲೈಟ್‌ನಲ್ಲಿ ಓಡಾಡುವುದನ್ನು ನಿಲ್ಲಿಸಿ ಸೀಟ್ ಬೆಲ್ಟ್ ಧರಿಸಿರಬೇಕೆಂದು ಕ್ಯಾಪ್ಟನ್ ಎಚ್ಚರಿಸಿದ್ದ. ಸ್ಮಿತಾ ಶರ್ವಾಣಿ ಥಟ್ಟನೆ ಎದ್ದು ಕಾಕ್ಪಿಟ್ ಕಡೆ ಸರಸರನೆ ನಡೆದಿದ್ದಳು. ಇಂಥ ಸಮಯದಲ್ಲಿ ಪ್ರಯಾಣಿಕರನ್ನು ಅಲರ್ಟ್ ಮಾಡುವುದು ಚೀಫ್ ಏರ್ ಹೋಸ್ಟೆಸ್ ಆದ ಅವಳ ಕೆಲಸವಾಗಿತ್ತು. ನಂತರ ಅರ್ಧ ಗಂಟೆಯಲ್ಲಿ ವಿಮಾನ ಮುಂಬಯಿಯ ಛತ್ರಪತಿ ಶಿವಾಜಿ ಮಹಾರಾಜ್ ಇಂಟರ್ ನ್ಯಾಷನಲ್ ಏರ್‌ಪೋರ್ಟನಲ್ಲಿ ಲ್ಯಾಂಡ್ ಆಗಿತ್ತು. ಆತ ಇಳಿಯುವಾಗ ಸ್ಮಿತಾ ಶರ್ವಾಣಿಗೆ ಕೇಳಿಸುವಂತೆ 'ನೀವು ಹೇಳಿದಂತೆ ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯೂ ಕೇವಲ ಮಾನಸಿಕ ಕಾಯಿಲೆಯಿಂದಷ್ಟೆ ಅಲ್ಲ, ಯಾವುದಾದರೊಂದು ದೈಹಿಕ ಕಾಯಿಲೆಯಿಂದಲೂ ನರಳುತ್ತಿರುತ್ತಾನೆ. ದೇವರು ಸೃಷ್ಟಿಸುವಾಗ ಪ್ರತಿಯೊಬ್ಬರಲ್ಲೂ ಯಾವುದಾದರೊಂದು ನ್ಯೂನತೆಯನ್ನು ಇಟ್ಟೇ ಇಟ್ಟಿರುತ್ತಾನೆ. ಅದ್ದರಿಂದಲೇ ಜಗತ್ತಿನಲ್ಲಿ ಯಾವ ವ್ಯಕ್ತಿಯೂ ಸಂಪೂರ್ಣ ನೆಮ್ಮದಿಯಿಂದ ಇರಲಾರ. ರಿಯಲಿ ಗಾಡ್ ಈಸ್ ಗ್ರೇಟ್' ಎಂದು ಹೇಳಿ ಹೋಗಿದ್ದ.

ಅದಾದ ಮೂರನೆಯ ದಿನ ವಿಮಾನದಲ್ಲಿ ಪೂರಾ ನೂರೆಂಬತ್ತು ಪ್ರಯಾಣಿಕರು ಭರ್ತಿಯಾಗಿದ್ದರು. ಸಿದ್ಧಾರ್ಥ ಕುಮಾರ್ ಮಾಮೂಲಿಯಾಗಿ ನಗೆ ಎಸೆಯುತ್ತಾ ವಿಮಾನ ಪ್ರವೇಶಿಸಿದ್ದ. ವಿಮಾನ ಟೇಕಾಫ್ ಆದ ನಂತರ ಗಗನಸಖಿಯರು ಪ್ರಯಾಣಿಕರಿಗೆ ತಿಂಡಿ ಮತ್ತು ಪಾನೀಯಗಳನ್ನು ವಿತರಿಸುವ ಕಾರ್ಯದಲ್ಲಿ ನಿರತರಾದರು. ಸಿದ್ಧಾರ್ಥ ಹುರುಪಿನಿಂದ ಓಡಾಡುತ್ತಿದ್ದ ಸ್ಮಿತಾ ಶರ್ವಾಣಿಯನ್ನು ಕಣ್ಣಿನ ಮೂಲಕ ಹತ್ತಿರ ಕರೆದಿದ್ದ. ಆಕೆ ನಸುನಗುತ್ತಾ ಬಂದು 'excuse me' ಎಂದು ತಲೆತಗ್ಗಿಸಿ ಮೃದು ಧ್ವನಿಯಲ್ಲಿ ಕೇಳಿದ್ದಳು. ಘಮ್ಮನೆ ಆವರಿಸಿಕೊಂಡ ಸುಮಧುರ ಪರಿಮಳದಲ್ಲಿ ಮುಳುಗೆದ್ದ ಅವನು 'ಒಂದು ಸ್ಟ್ರಾಂಗ್ ಕಾಫಿ ಬೇಕಿತ್ತು ವಿತ್ ಸಮ್ extra ಶುಗರ್. ಐ ಫೀಲ್ ಮೈ ಶುಗರ್ ಲೆವೆಲ್ ಹ್ಯಾಸ್ ಕಮ್ ಡೌನ್' ಎಂದ. ಸ್ಮಿತಾ ತುಸು ಗಾಬರಿಯಿಂದಲೇ 'ಶ್ಯೂರ್... ಡೋಂಟ್ ವರಿ. ಡು ಯು ನೀಡ್ ಡಾಕ್ಟರ್ ಹೆಲ್ಪ್. ಇವೊತ್ತು ಫ್ಲೈಟ್‌ನಲ್ಲಿ ಇಬ್ಬರು ಡಾಕ್ಟರ್ಸ್ ಪ್ರಯಾಣಿಸುತ್ತಿದ್ದಾರೆ' ಎಂದು ಎರಡು ಮೂರು ನಿಮಿಷಗಳಲ್ಲಿ ಕಾಫಿಯ ಕಪ್ಪನ್ನು ಅವನ ಕೈಗೆ ಕೊಟ್ಟಿದ್ದಳು. ಕಪ್ ಹಿಡಿದು 'ನೊ ನಾಟ್ ಸೋ ಸೀರಿಯಸ್, ವಿಚ್ ಪರ್ಫ್ಯೂಮ್' ಎಂದು ನಕ್ಕಿದ್ದ.

'ಫೆರಾರಿ ರೆಡ್. ಒಂದು ಡ್ರಾಪ್ ನಿಮಗೂ ಸ್ಪ್ರೇ ಮಾಡಲಾ' ಎಂದು ಕೆನ್ನೆಗಳಲ್ಲಿ ನಗುವಿನ ಕಾಮನಬಿಲ್ಲು ಮೂಡಿಸಿದ್ದಳು. ಅವನು ಮುಜುಗರದಿಂದಲೇ 'ನಿಮ್ಮೊಂದಿಗೆ ಅರ್ಧ ಗಂಟೆ ಮಾತನಾಡುವುದಿತ್ತು. ಸಾಧ್ಯವಾದರೆ ದಯವಿಟ್ಟು ಈ ಅಡ್ರೆಸ್ಸಿಗೆ ಬನ್ನಿ. ಅಂಡ್ ಇಟ್ಸ್ ನಾಟ್ ಸೋ ಇಂಪಾರ್ಟೆಂಟ್ ನಾರ್ ಕಾನ್ಫಿಡೆನ್ಶಿಯಲ್. ಇಲ್ಲಿ ಇನ್ಫಾರ್ಮಲ್ ಆಗಿ ಮಾತನಾಡಲಿಕ್ಕಾಗುವುದಿಲ್ಲ ಎಂಬ ಕಾರಣಕ್ಕಷ್ಟೆ' ಎಂದು ವಿಸಿಟಿಂಗ್ ಕಾರ್ಡ್ ಕೊಟ್ಟಿದ್ದ. ಕಾರ್ಡನ್ನು ತನ್ನ ಬಂಗಾರ ಬಣ್ಣದ ಕೋಟು ಜೇಬಿಗೆ ಇಳಿಬಿಟ್ಟುಕೊಂಡ ಸ್ಮಿತಾ ಶರ್ವಾಣಿ ಕಣ್ಣಗಲಿಸಿ ನಕ್ಕು. 'ಐ ವಿಲ್ ಟ್ರೈ ಮೈ ಬೆಸ್ಟ್, ಥ್ಯಾಂಕ್ಯೂ ಫಾರ್ ಯುವರ್ ಇನ್ವಿಟೇಶನ್' ಎಂದಿದ್ದಳು. ಅವಳು ಮತ್ತೆ ಅಂದು ಡ್ಯೂಟಿಗಾಗಿ ವಿಮಾನ ಹತ್ತಬೇಕಾಗಿದ್ದಿದ್ದು ರಾತ್ರಿ ಎಂಟು ಗಂಟೆಗೆ. ವಿಮಾನ ಇಳಿದು ಫ್ರೆಶಪ್ ಆದವಳ ಕೈ ಕೋಟಿನ ಜೇಬಿಗೆ ಹೋಗಿ ಸಿದ್ಧಾರ್ಥ ಕುಮಾರ್ ಕೊಟ್ಟಿದ್ದ ವಿಸಿಟಿಂಗ್ ಕಾರ್ಡನ್ನು ತೆಗೆದು ಕಣ್ಣಿನ ಮುಂದೆ ಹಿಡಿದಿತ್ತು. 'ಸಿದ್ಧಾರ್ಥ ಕುಮಾರ್, ಚೇರ್ಮನ್, ಸಿದ್ಧಾರ್ಥ ಗ್ರೂಪ್ ಆಫ್ ಕಂಪನೀಸ್, ಬಾಂದ್ರ ಕುರ್ಲಾ ಕಾಂಪ್ಲೆಕ್ಸ್, ಮುಂಬಯಿ' ಜೊತೆಗೆ ಅವನ ಫೋನ್ ನಂಬರ್. ಚಿನ್ನದ ಎರಕ ಹೊಯ್ದಂತೆ ಮಿನುಗುತ್ತಿದ್ದ ಅಕ್ಷರಗಳು.

ಟೈಮ್ ನೋಡಿಕೊಂಡಿದ್ದಳು. ಕರೆಕ್ಟಾಗಿ ಹನ್ನೆರಡು ಗಂಟೆ. ಅವಳಿದ್ದಲ್ಲಿಂದ ಅವನ ಅಡ್ರೆಸ್ಸಿಗೆ ಹೋಗಲು ಇಪ್ಪತ್ತೈದು ನಿಮಿಷಗಳಷ್ಟೆ. ಒಂದು ಕ್ಷಣ ಹೋಗುವುದೋ ಬೇಡವೋ ಎಂಬ ಗೊಂದಲಕ್ಕೆ ಬಿದ್ದಳು. ಅವಳ ಮನದ ಗೊಂದಲವನ್ನು ಮೀರಿ ಅವಳ ಬೆರಳು ಸಿದ್ಧಾರ್ಥನ ಫೋನ್ ನಂಬರನ್ನು ಒತ್ತಿತ್ತು. ಮೂರು ರಿಂಗ್ ಆದ ನಂತರ 'ಹಲೋ' ಆ ಕಡೆಯಿಂದ ಸಿದ್ಧಾರ್ಥನ ತುಸು ಭಾರವಾದ ಧ್ವನಿ. 'ಹಲೋ ನಾನು